# ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂ: ಉಕೃನಿ/ಕೃಭಾ/ಸುತ್ತೋಲೆ/2014-15

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ: 05-02-2015.

## ಸುತ್ತೋಲೆ-10

ವಿಷಯ:- ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಗಳಿಂದ ನೀರೆತ್ತಲು ರೈತರಿಗೆ ಡೀಸೆಲ್ ಪಂಪ್‌ಸೆಟ್‌ನ್ನು (ಸಮುದಾಯ ಸ್ವತ್ತಾಗಿ) ಉಚಿತವಾಗಿ ನೀಡುವ ಬಗ್ಗೆ ಹಾಗೂ ಇತರೆ ಅಂಶಗಳ ಕುರಿತು,

ಉಲ್ಲೇಖ:- 1. ಮಾನ್ಯ ಕೃಷಿ ಸಚಿವರು ಕೃಷಿ ಭಾಗ್ಯ ಯೋಜನೆಯ ಅನುಷ್ಠಾನ ಪ್ರಗತಿ ಪರಿಶೀಲನೆಗೆ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿದಾಗ ಸೂಚಿಸಿರುವಂತೆ,

2.ದಿನಾಂಕ:29-01-2015 ರಂದು ಕೃಷಿ ಆಯುಕ್ತರೊಂದಿಗೆ ನಡೆದ ಸಭೆಯಲ್ಲಿ ಸೂಚಿಸಿರುವಂತೆ,

*****

ಮಾನ್ಯ ಕೃಷಿ ಸಚಿವರು ಕೃಷಿ ಭಾಗ್ಯ ಯೋಜನೆಯ ಅನುಷ್ಠಾನ ಪ್ರಗತಿ ಪರಿಶೀಲನೆಗೆ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ರೈತರೊಡನೆ ಚರ್ಚಿಸುವ ಸಂದರ್ಭಗಳಲ್ಲಿ, ಕೃಷಿ ಭಾಗ್ಯ ಯೋಜನೆಯಲ್ಲಿ ಕೃಷಿ ಹೊಂಡದಿಂದ ನೀರೆತ್ತಲು ಸಹಾಯಧನದಡಿ ವಿತರಿಸುವ ಡೀಸೆಲ್ ಪಂಪ್‌ಸೆಟ್‌ನ್ನು ರೈತರು ವರ್ಷದಲ್ಲಿ ಕೇವಲ 2 ಅಥವಾ ಮೂರು ಬಾರಿ ಮಾತ್ರ ಉಪಯೋಗಿಸಬೇಕಿದ್ದು, ಉಳಿದಂತೆ ಅದರ ಉಪಯೋಗದ ಅವಶ್ಯಕತೆ ಇರುವುದಿಲ್ಲವೆಂದು ತಿಳಿದುಬಂದಿರುತ್ತದೆ. ಆದ್ದರಿಂದ ಒಬ್ಬ ರೈತರಿಗೆ ಒಂದು ಪಂಪ್ ಸೆಟ್ ನೀಡುವ ಬದಲು ಕನಿಷ್ಠ ನಾಲ್ಕು ರೈತರು ಒಟ್ಟಾಗಿ ಒಂದೇ ಪಂಪ್‌ಸೆಟ್‌ನ್ನು ಹೊಂದಾಣಿಕೆ ಮಾಡಿಕೊಂಡು ಉಪಯೋಗಿಸುವುದಾಗಿ ಮುಂದೆ ಬಂದಲ್ಲಿ ಅವರಿಗೆ ಪ್ರಸ್ತುತ ನೀಡಲಾಗುತ್ತಿರುವ ಶೇ. 50/ 90 ರ ಸಹಾಯಧನ ಬದಲಾಗಿ ಉಚಿತವಾಗಿ ನೀಡಬಹುದೆಂದು ಅಭಿಪ್ರಾಯಿಸಿದ್ದು, ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿರುತ್ತಾರೆ. ಇದಲ್ಲದೇ, ಕ್ಷೇತ್ರ ಮಟ್ಟದಲ್ಲಿ ಹಲವು ಸ್ಪಷ್ಟೀಕರಣ ಕೋರಿದ್ದು, ಈ ಕೆಳಗಿನಂತೆ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಗೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

1. ಕೃಷಿ ಭಾಗ್ಯ ಯೋಜನೆಯ ಫಲಾನುಭವಿ ರೈತರಿಂದ ಗುಂಪಿನಲ್ಲಿ ಡೀಸೆಲ್ ಪಂಪ್ಸೆಟ್ ಬಳಸಲು ಕೋರಿಕೆ ಬಂದಲ್ಲಿ, ಹೊಂದಾಣಿಕೆ ಮಾಡಿಕೊಳ್ಳುವ ರೈತರಿಂದ ಸ್ಪಷ್ಟನೆ/ ವಿವರಗಳನ್ನು ರೂ.20/- ಸ್ಟಾಂಪ್‌ಪೇಪರ್‌ನಲ್ಲಿ ಮುಚ್ಚಳಿಕೆಯಲ್ಲಿ (ನಮೂನೆ ಲಗತ್ತಿಸಿದೆ) ಪಡೆದು, ಕನಿಷ್ಠ 4 ರೈತರಿಗೆ ಒಂದು ಡೀಸೆಲ್ ಪಂಪ್‌ಸೆಟ್‌ಅನ್ನು ಉಚಿತವಾಗಿ ವಿತರಿಸಲು ಕ್ರಮ ಕೈಗೊಳ್ಳಲು ತಿಳಿಸಿದೆ. ಮುಚ್ಚಳಿಕೆಯಲ್ಲಿ ಸರಬರಾಜು ಮಾಡಲು ತಿಳಿಸಿರುವ ರೈತರ ಹೆಸರಿನಲ್ಲಿ ಇಲಾಖೆಯ ದರಕರಾರಿನಲ್ಲಿ ಸೇರಿರುವ ಸಂಸ್ಥೆಯಿಂದ ಡೀಸೆಲ್ ಪಂಪ್‌ಸೆಟ್ ಒದಗಿಸಿ, ಸದರಿ ರೈತರುಗಳ ಹೆಸರಿನಲ್ಲಿ ಬಿಲ್ಲು ಪಡೆದು, ಸಹಾಯಧನವನ್ನು ರೈತ/ ಸಂಸ್ಥೆಗೆ ಪಾವತಿಸಲು ಕ್ರಮ ಕೈಗೊಳ್ಳುವುದು.
2. ಕೃಷಿ ಭಾಗ್ಯ ಯೋಜನೆಯಡಿ ಫಲಾನುಭವಿಗಳು ಪಶುಸಂಗೋಪನೆ ಘಟಕಗಳನ್ನು ಆಯ್ಕೆ ಮಾಡಿದಲ್ಲಿ, ಜಿಲ್ಲೆಗಳಿಗೆ ಈಗಾಗಲೇ ಬಿಡುಗಡೆ ಮಾಡಿದ ಅನುದಾನದಲ್ಲಿ ವೆಚ್ಚ ಭರಿಸುವುದು. ಸದರಿ ಘಟಕಕ್ಕೆ ಪ್ರತ್ಯೇಕ ಅನುದಾನ ನೀಡಲಾಗುವುದಿಲ್ಲ.
3. ಈಗಾಗಲೇ ಆಯ್ಕೆ ಮಾಡಲಾದ (400+20) ಫಲಾನುಭವಿಗಳಲ್ಲಿ ಪ್ರಸಕ್ತ ಸಾಲಿನ ಫಲಾನುಭವಿಗಳನ್ನು ಹೊರತುಪಡಿಸಿ, ಆಸಕ್ತ ಅರ್ಹ ಫಲಾನುಭವಿಗಳಿಗೆ ಕೂಡಲೇ ಕಾರ್ಯಾದೇಶವನ್ನು ನೀಡಿ ಆದಷ್ಟು ಬೇಗ ವೆಚ್ಚ ಭರಿಸುವುದು.

4. ಕೃಷಿ ಭಾಗ್ಯ ಯೋಜನೆಯ ಕಾರ್ಯ ಅನುಷ್ಠಾನಕ್ಕೆ ವೆಚ್ಚ ಭರಿಸುವ ವಿಧಾನ:

I) ಕೃಷಿ ಹೊಂಡ ನಿರ್ಮಾಣ / Inlet Outlet ಪೈಪ್ ಸಮೇತ/ ಬದು ನಿರ್ಮಾಣ–

ಅ) ರೈತರು ಸ್ವಂತ ಬಂಡವಾಳ ಹೂಡಿಕೆಯಿಂದ ಕೃಷಿ ಹೊಂಡ ನಿರ್ಮಾಣ ಮಾಡಿದಲ್ಲಿ ಸಹಾಯಧನವನ್ನು ನೇರವಾಗಿ RTGS ಮೂಲಕ ರೈತರ ಖಾತೆಗೆ ಜಮಾ ಮಾಡುವುದು.

ಆ) ರೈತರು ಬ್ಯಾಂಕ್ ಸಾಲ ಪಡೆದಲ್ಲಿ ಸಹಾಯಧನವನ್ನು RTGS ಮೂಲಕ ಸಾಲ ಪಡೆದ ಬ್ಯಾಂಕ್‌ಗೆ (ರೈತರ ಲೋನ್ ಖಾತೆಗೆ) ಜಮಾ ಮಾಡುವುದು.

II) ಪಾಲಿಥೀನ್ ಹೊದಿಕೆ/ ಡೀಸೆಲ್ ಪಂಪ್‌ಸೆಟ್/ ಲಘು ನೀರಾವರಿ–

ಅ) ರೈತರು ಸ್ವಂತ ಬಂಡವಾಳದಿಂದ ಇಲಾಖೆಯಿಂದ ಅನುಮೋದಿತ ಸಂಸ್ಥೆಯ ಮೂಲಕ ಘಟಕ ಅನುಷ್ಠಾನಗೊಳಿಸಿದಲ್ಲಿ, ಸಹಾಯಧನವನ್ನು ನೇರವಾಗಿ RTGS ಮೂಲಕ ರೈತರ ಖಾತೆಗೆ ಜಮಾ ಮಾಡುವುದು.

ಆ) ರೈತರು ಬ್ಯಾಂಕ್ ಸಾಲ ಪಡೆದಲ್ಲಿ ಸಹಾಯಧನವನ್ನು RTGS ಮೂಲಕ ಸಾಲ ಪಡೆದ ಬ್ಯಾಂಕ್‌ಗೆ (ರೈತರ ಲೋನ್ ಖಾತೆಗೆ) ಜಮಾ ಮಾಡುವುದು.

ಇ) ರೈತರು Empanelled agency ಮೂಲಕ ಅನುಷ್ಠಾನಗೊಳಿಸಿದ್ದಲ್ಲಿ, ರೈತರ ವಂತಿಕೆಯನ್ನು DD ಮೂಲಕ ಪಾವತಿಸುವುದು ಹಾಗೂ ಸರ್ಕಾರದ ವಂತಿಕೆಯನ್ನು ರೈತರಿಂದ ಲಿಖಿತವಾಗಿ ಒಪ್ಪಿಗೆಯನ್ನು ಪಡೆದು ನೇರವಾಗಿ RTGS ಮೂಲಕ ಸಂಸ್ಥೆಯ ಖಾತೆಗೆ ಜಮಾ ಮಾಡುವುದು.

III) ಕೃಷಿ ಹೊಂಡ ಕಾಮಗಾರಿ ಪೂರ್ಣಗೊಂಡ ನಂತರ ಅಳತೆ ತಪಾಸಣೆ ನಡೆಸಿ, ಹೊಂಡದ ವೆಚ್ಚಕ್ಕೆ ಶೇ.60 ರಷ್ಟು ಹಣ ಪಾವತಿಸಲು ಕ್ರಮ ಜರುಗಿಸಬಹುದು.

IV) ಬೆಳೆ ಪದ್ಧತಿ–

ಅ) ರೈತರು ತೋಟಗಾರಿಕೆ ಬೆಳೆ ಪದ್ಧತಿಗೆ ಸ್ವಂತ ಹಣ ಹೂಡಿಕೆ ಮಾಡಿದಲ್ಲಿ, ರೈತರ ಖಾತೆಗೆ ನೇರವಾಗಿ ವರ್ಗಾಯಿಸುವುದು.

ಆ) ರೈತರು ಬ್ಯಾಂಕ್ ಸಾಲ ಪಡೆದಲ್ಲಿ ಸಹಾಯಧನವನ್ನು RTGS ಮೂಲಕ ಸಾಲ ಪಡೆದ ಬ್ಯಾಂಕ್‌ಗೆ (ರೈತರ ಲೋನ್ ಖಾತೆಗೆ) ಜಮಾ ಮಾಡುವುದು.

5. ಕೃಷಿ ಭಾಗ್ಯ ಯೋಜನೆಯ ತಂತ್ರಾಂಶದಲ್ಲಿ ಫಲಾನುಭವಿಗಳಿಗೆ ಸಹಾಯಧನ ಮೊತ್ತ ಪಾವತಿಗೆ ಅನುಮೋದನೆ ನೀಡುವಾಗ IFSC Code ಹಾಗೂ ಪೂರ್ಣ ಖಾತೆ ಸಂಖ್ಯೆ (13 ಅಥವಾ 14 ಸಂಖ್ಯೆ) ಯನ್ನು ಸಂಬಂಧಿಸಿದ ಖಾತೆಯಿಂದ ಧೃಡೀಕರಿಸಿಕೊಂಡು ಅನುಮೋದನೆ ನೀಡುವುದು.

6.2.15.

ಕೃಷಿ ಆಯುಕ್ತರು

ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು(23 ಜಿಲ್ಲೆಗಳು) ಇವರಿಗೆ ಮುಂದಿನ ಕ್ರಮಕ್ಕಾಗಿ

(ಕನಿಷ್ಟ ರೂ.20/– ರ ಬಾಂಡ್ ಪೇಪರ್)

**ಕೃಷಿ ಭಾಗ್ಯ ಯೋಜನೆಯಡಿ ರೈತರು ಒಟ್ಟಾಗಿ ಡೀಸೆಲ್ ಪಂಪ್ ಸೆಟ್ ಅನ್ನು ಉಚಿತವಾಗಿ ಪಡೆಯಲು ಬರೆದುಕೊಂಡ ಮುಚ್ಚಳಿಕೆ**

ಶ್ರೀಮತಿ/ ಶ್ರೀ 1)____________________ 2)_________________________ 3)____________________ ಮತ್ತು 4) ______________________, ಆದ ನಾವು, _______________________ಗ್ರಾಮ____________________ಹೋಬಳಿ, ___________________ತಾಲ್ಲೂಕು, _________________________ಜಿಲ್ಲೆಯ ರೈತರಾಗಿದ್ದು, ಕ್ರಮವಾಗಿ ಸರ್ವೆ ನಂಬರ್ ____________, _____________, ______________ & _________________ ರಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಗಳನ್ನು ನಿರ್ಮಿಸಿರುತ್ತೇವೆ. ನಾವೆಲ್ಲರೂ ಒಟ್ಟಾಗಿ ಕೃಷಿ ಭಾಗ್ಯ ಯೋಜನೆಯಡಿ ಡೀಸೆಲ್ ಪಂಪ್ಸೆಟ್ ಅನ್ನು ಉಚಿತವಾಗಿ ಪಡೆದು ಹೊಂದಾಣಿಕೆಯಿಂದ ನೀರೆತ್ತುವ ಕಾರ್ಯಕ್ಕೆ ಉಪಯೋಗಿಸಲಾಗುವುದೆಂದು ಧೃಡೀಕರಿಸುತ್ತೇವೆ. ಇದಕ್ಕಾಗಿ ಶ್ರೀ.__________________ ಇವರ ಹೆಸರಿಗೆ, ಡೀಸೆಲ್ ಪಂಪ್‌ಸೆಟ್ (ವಿವರ) _____________________________, ಸರಬರಾಜು ಮಾಡಲು ಒಪ್ಪಿದ್ದು, ಸದರಿ ಪಂಪ್‌ಸೆಟ್ ನಿರ್ವಹಣೆಯ ಜವಾಬ್ದಾರಿಯನ್ನು ನಾವೆಲ್ಲ ಒಟ್ಟಾಗಿ ವಹಿಸಿಕೊಳ್ಳುತ್ತೇವೆ. ಮರು ಮಾರಾಟ ಮಾಡುವುದಿಲ್ಲವೆಂದು ಈ ಮೂಲಕ ಧೃಡೀಕರಿಸುತ್ತೇವೆ.

ಸಮುದಾಯ ನಿರ್ವಹಣೆಯಲ್ಲಿ ಯಾವುದೇ ಸಮಸ್ಯೆ ಉದ್ಭವವಾದಲ್ಲಿ ನಮ್ಮ ಹಂತದಲ್ಲಿಯೇ ಬಗೆಹರಿಸಿಕೊಳ್ಳುವುದಾಗಿ ಈ ಮೂಲಕ ಮುಕ್ಕಳಿಕೆ ನೀಡುತ್ತಿದ್ದೇವೆ.

ಸಹಿ ಹಾಗೂ ವಿಳಾಸ

1)

2)

3)

4)